ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ**81/2015**

ದಿನಾಂಕ **11.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿ ತೆಲುಗು ಭಾಷೆ ಬಲ್ಲವರಾಗಿದ್ದು, ಕನ್ನಡ ಭಾಷೆ ಸರಿಯಾಗಿ ಬಾರದ ಕಾರಣ ಶ್ರೀಮತಿ. ಆರ್.ಎನ್.ಬಿ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಿ, ಪ್ರಮಾಣ ವಚನ ಬೋಧಿಸಿ ಸಾಕ್ಷಿಯ ಸಾಕ್ಷವನ್ನು ಬರೆದುಕೊಳ್ಳಲಾಯಿತು.

ಪಿ.ಡಬ್ಲ್ಯೂ-1

ಮುಂದುವರೆದ ಪಾಟೀ ಸವಾಲುಃ **1, 2, 7** ಮತ್ತು **9** ನೇ ಪ್ರತಿವಾದಿಗಳ ಪರ ಶ್ರೀ.ಐ.ಆರ್.ಎಲ್ ವಕೀಲರಿಂದಃ

5. ನನ್ನ ಗಂಡನ ತಂದೆಗೆ ಮೂರು ಜನ ಅಣ್ಣ ತಮ್ಮಂದಿರು ಅವರುಗಳ ಹೆಸರು ನರಸಿಂಹರೆಡ್ಡಿ ನಲ್ಲಾರೆಡ್ಡಿ ಸಣ್ಣನರಸರೆಡ್ಡಿ, ನನ್ನ ಗಂಡನ ತಂದಗೆ ನಾಲ್ಕು ಜನ ಮಕ್ಕಳು. ಅವರಲ್ಲಿ ಇಬ್ಬರು ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು. ಅವರೆಲ್ಲರನ್ನು ನಾನು ಈ ಪ್ರಕರಣದಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ. ದಿ.30.07.1957 ರಲ್ಲಿ ನನ್ನ ಗಂಡನ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ನೊಂದಣಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಮಾಡಿಕೊಳ್ಳುವ ಕಾಲಕ್ಕೆ ನನ್ನ ಗಂಡನ ತಂದೆ ಅವರ ತಂದೆಗೆ ಯಾವುದೇ ಜಮೀನುಗಳು ಇರಲಿಲ್ಲ ಎಂದರೆ ಇದ್ದವು. ಆ ಸಮಯದಲ್ಲಿ ನನ್ನ ಮಾವನ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರಲಿಲ್ಲ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. 1957 ರಲ್ಲಿ ಆಸ್ತಿಗಳು ವಿಭಾಗ ಆದ ನಂತರ, ದಾವಾ ಆಸ್ತಿಗಳನ್ನು ದೊಡ್ಡ ನರಸಿಂಹರೆಡ್ಡಿ ಮತ್ತು ಸಣ್ಣ ನರಸಿಂಹರೆಡ್ಡಿ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ ಆಸ್ತಿಗಳು ಮೊದಲೆ ಇದ್ದವು. ದೊಡ್ಡ ನರಸಿಂಹರೆಡ್ಡಿ ಮತ್ತು ಸಣ್ಣ ನರಸಿಂಹರೆಡ್ಡಿ ರವರು ಶೇಶಗಿರಿ ರಾವ್ ರವರಿಂದ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಮೊದಲೆ ಅವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ದಾವಾ ಸರ್ವೆ ನಂಬರ್ 256 ಆಗಿರುತ್ತದೆ. ದಾವಾ ಸ್ವತ್ತುಗಳನ್ನು ನಾನು

ನೋಡಿದ್ದೇನೆ. ಅದರ ಚೆಕ್ಕುಬಂದಿಯನ್ನು ನನಗೆ ಹೇಳಲು ಆಗುತ್ತದೆ. ದಾವಾ ಅನುಸೂಚಿ-1 ರ ಪೂರ್ವಕ್ಕೆ ಸಣ್ಣಆಂಜಿನಪ್ಪ, ಪಶ್ಚಿಮಕ್ಕೆ ಬೋರಮ್ಮ, ಉತ್ತರಕ್ಕೆ ಬಜ್ಜಪ್ಪ ಮತ್ತು ದಕ್ಷಿಣಕ್ಕೆ ಬಾಬು ರವರ ಜಮೀನು ಇದೆ. ದಾವಾ ಅನೂಸೂಚಿ-2 ರ ಸ್ವತ್ತಿಗೂ ಈಗ ನಾನು ಹೇಳಿದ ಚೆಕ್ಕುಬಂದಿ ಇರುತ್ತದೆ. ಖಾಲಿ ಜಾಗದ ಖಾತೆ ಸಂಖ್ಯೆ ನನಗೆ ಗೊತ್ತಿಲ್ಲ. ಕ್ರಯಕ್ಕೆ ಪಡೆದಾಗಿನಿಂದಲೂ ದಾವಾ ಸ್ವತ್ತು ದೊಡ್ಡ ನರಸಿಂಹರೆಡ್ಡಿ ಮತ್ತು ಚಿಕ್ಕ ನರಸಿಂಹರೆಡ್ಡಿ ರವರ ಹೆಸರಿಗೆ ಬರುತ್ತಿದೆ ಎಂದರೆ ಸಾಕ್ಷಿ ಅವರ ಹೆಸರಿಗೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

7. ಕ್ರಯಕ್ಕೆ ಪಡೆದ ನಂತರ ದೊಡ್ಡ ನರಸಿಂಹರೆಡ್ಡಿ ಮತ್ತು ಚಿಕ್ಕ ನರಸಿಂಹರೆಡ್ಡಿ ರವರ ಹೆಸರಿಗೆ ಕೇಸ್ ನಂ.53/59-60 ರಂತೆ ಖಾತೆ ಪಹಣಿ ಬರುತ್ತಿವೆ ಎಂದರೆ ನನಗೆ ಗೊತ್ತಿಲ್ಲ. ಈಗಲೂ ದಾವಾ ಸ್ವತ್ತಿನ ಸ್ವಾಧೀನದಲ್ಲಿ ದೊಡ್ಡ ನರಸಿಂಹರೆಡ್ಡಿ ಮತ್ತು ಚಿಕ್ಕ ನರಸಿಂಹರೆಡ್ಡಿ ರವರ ವಾರಸುದಾರರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಗಂಡನ ತಂದೆಗೆ ಆಸ್ತಿಗಳನ್ನು ಕೊಡದೆ ಅವರಿಬ್ಬರ ಹೆಸರಿಗೆ ಮಾತ್ರ ಮಾಡಿಸಿಕೊಂಡು ಅವರೆ ಸ್ವಾಧೀನದಲ್ಲಿ ಇದ್ದಾರೆ. ನಾನಾಗಲಿ ನಮ್ಮ ವಾರಸುದಾರರಾಗಲಿ ಸದರಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಅವರ ಹೆಸರಿಗೆ ಮಾಡಿಸಿಕೊಂಡು ಅವರೆ ಇದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ.

8. ನಾನು ಈಗ ಅಚ್ಚಮ್ಮನಹಳ್ಳಿಯಲ್ಲಿ ವಾಸವಿದ್ದೇನೆ. ನಾನು ವಾಸವಿರುವ ಮನೆಯ ಖಾತೆ ಸಂಖ್ಯೆ ನನಗೆ ನೆನಪಿಲ್ಲ. ನಾನು ಇರುವ ಜಾಗದ ಚೆಕ್ಕುಬಂದಿ ನನಗೆ ಗೊತ್ತಿದೆ. ಪೂರ್ವಕ್ಕೆ ನಲ್ಲಾ ರೆಡ್ಡಿ ರವರ ಮನೆ, ಪಶ್ಚಿಮಕ್ಕೆ ನಾರಾಯಣಪ್ಪ ರವರು ಮನೆ, ಉತ್ತರಕ್ಕೆ ಖಾಲಿ ಜಾಗ ಮತ್ತು ದಕ್ಷಿಣಕ್ಕೆ ಅರುಣಮ್ಮ ರವರ ಮನೆ. ನಾವು ವಾಸವಿರುವ ಮನೆ ಜಾಗವನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ನಾವು ಬೇರೆ ಹೋದ ನಂತರ ಆ ಜಾಗವನ್ನು ಖರೀದಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಜಾಗವನ್ನು 3 ವರ್ಷದ ಹಿಂದೆ ಖರೀದಿ ಮಾಡಿದ್ದೇವೆ. ಯಾವಾಗ ಬೇರೆ ಹೋಗಿದ್ದೀರಾ ಎಂದರೆ ನಾವು ಬೇರೆ ಹೋಗಿಲ್ಲ, ಆದರೆ ಜಾಗ ಖರೀದಿ ಮಾಡಿದ್ದೇವೆ. ನಮ್ಮ ಮಾವನಿಗೆ ಯಾವುದೇ ಆಸ್ತಿಗಳು ಇರಲಿಲ್ಲ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ